**CC No.2210/2024**
**DW-1**

**ದಿನಾಂಕ 20.09.2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಪಾಟೀ ಸವಾಲುಃ ದೂರುದಾರರ ಪರ: ಶ್ರೀ ಪಿ ಸಿ ಡಿ ವಕೀಲರಿಂದಃ</u>**

1. ಈಗ ಒಂದುವರೆ ಎರಡು ವರ್ಷಗಳಿಂದ ನನಗೆ ದೂರುದಾರರ ಗಂಡ ಶಿವಕುಮಾರ ರವರ ಪರಿಚಯ ಇರುತ್ತದೆ. ನನಗೆ 2022 ರಿಂದ ಶಿವಕುಮಾರ್ ರವರ ಪರಿಚಯ ಇದೆ ಎಂದು ನನ್ನ ಮುಖ್ಯ ವಿಚಾರಣೆಯಲ್ಲಿ ನುಡಿದಿರುತ್ತೇನೆ ಎಂದರೆ ಸರಿ. ಪರಿಚಯ ಆದ ತಕ್ಷಣ ಅವರಿಂದ ಸಾಲ ಪಡೆದುಕೊಂಡಿರುತ್ತೀರಿಯೇ ಎಂಬ ಪ್ರಶ್ನೆಗೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಜುಲೈ 2024 ರಲ್ಲಿ ನಾನು ದೂರುದಾರರಿಗೆ ವಿಡಿಯೋ ಕಾಲ್ ಮಾಡಿ ನನ್ನ ತಾಯಿ ಆರೋಗ್ಯ ಸರಿ ಇಲ್ಲ, ಚಿಕಿತ್ಸೆಗೆ ಹಣ ಬೇಕಾಗಿದೆ ಎಂದು ಹೇಳಿ ನಾನು ದೂರುದಾರನಿಂದ ರೂ.3 ಲಕ್ಷ ಸಾಲ ಪಡೆದುಕೊಂಡಿದ್ದೆನು ಎಂದರೆ ಸರಿಯಲ್ಲ. ನಂತರ ನೀವು ನೀಡಿದ ಚೆಕ್ಕಿನಲ್ಲಿ ನಿಮ್ಮ ಸಹಿ ತಪ್ಪಾಗಿದೆ ಎಂದು ಹೇಳಿ ನೀವು ಖುದ್ದು ಶಾಖಾ ವ್ಯವಸ್ಥಾಪಕರ ಹತ್ತಿರ ಹೋಗಿ ಸಹಿಯನ್ನು ಪರಿಶೀಲನೆ ಮಾಡಿಸಿ ಚೆಕ್ ನೀಡಿರುತ್ತೀರಿ ಎಂದರೆ ಸಾಕ್ಷಿಯು ದೂರುದಾರರೇ ಕರೆದುಕೊಂಡು ಹೋಗಿದ್ದರು ಎಂದು ನುಡಿಯುತ್ತಾರೆ. ನೀವು ಸಹಿ ಮಾಡದೇ ಖಾಲಿ ಚೆಕ್ಕನ್ನು ನೀಡಿದ್ದೀರಿಯೇ ಎಂದರೆ ಸಾಕ್ಷಿಯು ಸರಿ ಎಂದು ನುಡಿಯುತ್ತಾರೆ. ನೀವು ಸಹಿ ಮಾಡಿ ನೀಡಿದ್ದ ಚೆಕ್ಕಿನಲ್ಲಿನ ಸಹಿ ಬ್ಯಾಂಕಿನ ಮಾದರಿ ಸಹಿಯೊಂದಿಗೆ ತಾಳೆ ಆಗುತ್ತಿರಲಿಲ್ಲ ಆದ್ದರಿಂದ ಶಾಖಾ ವ್ಯವಸ್ಥಾಪಕರು ಸರಿಯಾದ ಸಹಿ ಮಾಡಿ ಇನ್ನೊಂದು ಚೆಕ್ ನೀಡುವಂತೆ ಹೇಳಿದ್ದರಿಂದ ನಾನು ದೂರುದಾರರಿಗೆ ಸಹಿ ಮಾಡಿ ಇನ್ನೊಂದು ಚೆಕ್ಕನುನ ನೀಡಿದ್ದೆನು ಎಂದರೆ ಸರಿಯಲ್ಲ. ಚೆಕ್ಕಿನಲ್ಲಿನ ಮೊತ್ತವನ್ನು ನೀವೆ ನಮೂದು ಮಾಡಿದ್ದೀರಿ ಎಂದರೆ ಸಾಕ್ಷಿಯು ದೂರುದಾರರು ಹೇಳಿದ್ದರಿಂದ ನಾನು ಮೊತ್ತವನ್ನು ನಮೂದು ಮಾಡಿದ್ದೆನು ಎಂದು ನುಡಿಯುತ್ತಾರೆ. ದೂರುದಾರನಿಂದ ಸಾಲ ಪಡೆದುಕೊಂಡು ಮರುಪಾವತಿ ಮಾಡುವುದರಿಂದ ತಪ್ಪಿಸಿಕೊಳ್ಳಲು ಕೊಪ್ಪಳಕ್ಕೆ ವರ್ಗಾವಣೆ ಮಾಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ದೂರುದಾರರು ಹಣ ಮರುಪಾವತಿ

ಮಾಡುವಂತೆ ಕೇಳಿದಾಗ ನಾನು ಹಣ ಮರುಪಾವತಿ ಮಾಡದೇ ಮನಸ್ಸಿಗೆ ಬಂದಂತೆ ಮಾತನಾಡಿರುತ್ತೇನ ಎಂದರೆ ಸರಿಯಲ್ಲ.

2. ದೂರುದಾರರು ನಿಮ್ಮಿಂದ ಒತ್ತಾಯ ಪೂರ್ವಕವಾಗಿ ಚೆಕ್ ಪಡೆದುಕೊಂಡಿದ್ದಾರೆ ಎಂದು ಅವರ ವಿರುದ್ದ ದೂರು ದಾಖಲು ಮಾಡಿಲ್ಲ ಎಂದರೆ ಸಾಕ್ಷಿಯು ದೂರು ದಾಖಲಿಸಿದರೆ ನಿನ್ನನ್ನು ಬಿಡುವುದಿಲ್ಲ ಎಂದು ದೂರುದಾರರು ನನಗೆ ಬೆದರಿಕೆ ಹಾಕಿದ್ದರು ಎಂದು ನುಡಿಯುತ್ತಾರೆ. ನಾನು ಕೊಪ್ಪಳದಲ್ಲಿಯೂ ಸಹ ದೂರು ದಾಖಲು ಮಾಡಿಲ್ಲ ಎಂದರೆ ಸರಿ. ನನ್ನ ಸಹೋದ್ಯೋಗಿಯಾಗಿ ಶಿವಕುಮಾರ್ ಹಾಗೂ ಅವರ ಹೆಂಡತಿ ನನ್ನಿಂದ ಬಲಂತವಾಗಿ ಚೆಕ್ ಪಡೆದುಕೊಂಡಿದ್ದಾರೆ ಎಂದು ನಿಮ್ಮ ಮೇಲಾಧಿಕಾರಿಗಳಿಗೆ ತಿಳಿಸಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ಯಾರಿಗಾದರು ವಿಷಯ ತಿಳಿಸಿದರೆ ನಿನ್ನನ್ನು ಬಿಡುವುದಿಲ್ಲ ಎಂದು ನನಗೆ ಬೆದರಿಕೆ ಹಾಕಿದ್ದರಿಂದ ನಾನು ಯಾರಿಗೂ ತಿಳಿಸಿಲ್ಲ ಎಂದು ನುಡಿಯುತ್ತಾರೆ. ಜೂನ್ 10 ರಂದು ನೀವು ಚೆಕ್ಕನ್ನು ನೀಡಿ ಜೂನ್ 21 ರಂದು ನೀವು ಆತ್ಮಹತ್ಯೆ ಮಾಡಿಕೊಳ್ಳಲು ಪ್ರಯತ್ನಿಸಿರುತ್ತೀರಾ ಎಂದರೆ ಸಾಕ್ಷಿಯು ಸರಿ ಎಂದು ನುಡಿಯುತ್ತಾರೆ. ನಾನು ಮಾನ್ವಿ ತಾಲೂಕಿನ ನೀರ್ ಮಾನ್ವಿ ಯಲ್ಲಿ ಆತ್ಮಹತ್ಯೆಗೆ ಪ್ರಯತ್ನಿಸಿದ್ದೆನು. ನನ್ನ ವೈಯಕ್ತಿಕ ಕಾರಣಗಳಿಗಾಗಿ ಆತ್ಮಹತ್ಯೆಗೆ ಪ್ರಯತ್ನಿಸಿ ದೂರುದಾರರ ವಿರುದ್ದ ಸುಳ್ಳು ಆಪಾದರೆ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ದೂರುದಾರರು ನನಗೆ ಪೋಲಿಸರಿಗೆ ದೂರು ನೀಡದಂತೆ ತಿಳಿಸಿದ್ದರು ಎಂದು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ದೂರುದಾರರಿಗೆ ಹಣ ಮರುಪಾವತಿ ಮಾಡುವುದರಿಂದ ತಪ್ಪಿಸಿಕೊಳ್ಳಲು ಆತ್ಮಹತ್ಯೆಗೆ ಪ್ರಯತ್ನಿಸಿರುವಂತೆ ನಟಿಸಿ ದೂರುದಾರರ ವಿರುದ್ದ ಸುಳ್ಳು ಆಪಾದನೆ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ.

3. ನಾನು ದಿಃ 13.08.2024 ರಿಂದ ಕೊಪ್ಪಳದ ಕಚೇರಿಯಲ್ಲಿ ಕೆಲಸ ಮಾಡುತ್ತಿದ್ದೇನೆ. ನಾನು ಬ್ಯಾಂಕಿನ ವ್ಯವಸ್ಥಾಪಕರ ಸಮಕ್ಷಮ ಸ್ವತಃ ಚೆಕ್ಕನ್ನು ಪಡೆದು ದೂರುದಾರರಿಗೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಶಾಖಾ ವ್ಯವಸ್ಥಾಪಕರು ಚೆಕ್ಕಿನಲ್ಲಿನ ನನ್ನ ಸಹಿಯನ್ನು ತಾಳೆ ಮಾಡಿ ನೋಡಿದ ನಂತರ ನಾನು ದೂರುದಾರನಿಂದ ನನ್ನ ತಾಯಿಯ ಚಿಕಿತ್ಸೆಗೆ ಹಣ ಸಾಲ ಪಡೆದುಕೊಂಡು ಹೋಗಿರುತ್ತೇನೆ ಎಂದರೆ ಸರಿಯಲ್ಲ.

ನಾನು ಸ್ವ-ಇಚ್ಚೆಯಿಂದ ಚೆಕ್ಕನ್ನು ನೀಡಿದ್ದರೂ ಸಹ ಈಗ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರು**
**ಯಾದಗಿರಿ**